1 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ , ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

LAC Misc No:	**57/2023**

ಸಾಕ್ಷಿದಾರರ ಹೆಸರು	**ಆರ್ ಶ್ರೀನಿವಾಸ್**	
ತಂದೆಯ ಹೆಸರು	**ರಾಮಯ್ಯ**	
ವಯಸ್ಸು	**58 ವರ್ಷ**	
ಉದ್ಯೋಗ	**ವ್ಯವಸಾಯ**	**RW.1**
ವಾಸ ಸ್ಥಳ	**ಯಡವನಹಳ್ಳಿ ಗ್ರಾಮ, ಆನೇಕಲ್ ತಾಲ್ಲೂಕು.**	**ಸಾಕ್ಷಿಗೆ ದಿಃ 12.02.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.**

ಮುಂದುವರಿದ ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಾದ ಶ್ರೀ ಆರ್.ಕೆ ರವರಿಂದಃ

ಆಧಾರ್ ಕಾರ್ಡ್ ಅನ್ನು ನಿ.ಆರ್ - 29 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ. ಆರ್ ವಕೀಲರಿಂದಃ

ಸರ್ವೆ ನಂಬರ್ 29/2 ರಲ್ಲಿ 15 ಗುಂಟೆ ಜಮೀನನ್ನು ಕರ್ನಾಟಕ ಗೃಹ ಮಂಡಳಿಯವರು ಸ್ವಾಧೀನಪಡಿಸಿಕೊಂಡಿರುತ್ತಾರೆ. 2013 ರಲ್ಲಿ ಅಂತಿಮ ಅಧಿಸೂಚನೆ ನನ್ನ ಹೆಸರಿನಲ್ಲಿ ಆಗಿದೆ ಎಂದರೆ ಇದೆ. ದಿನಾಂಕ 21.06.2018 ರಲ್ಲಿ ಅವಾರ್ಡ್ ನನ್ನ ಹೆಸರಿನಲ್ಲಿ ಆಗಿದೆ ಎಂದರೆ ಸರಿ ಇದೆ. ಸರ್ವೆ ನಂಬರ್ 29/2 ಆಸ್ತಿ ರೀ ಗ್ರಾಂಟ್ ಆದ ಸ್ವತ್ತು ಎಂದರೆ ಸರಿ ಇದೆ. ಸಾಕ್ಷಿ ಸದರಿ ಸ್ವತ್ತನ್ನು ನಾನು 15 ವರ್ಷ ಆದ ನಂತರ ಸರ್ಕಾರದಿಂದ ಅನುಮತಿ ಪಡೆದು ಖರೀದಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ಮೂಲ ಮಾಲೀಕರ ಸಹಿ ಪಡೆದು ಖರೀದಿ ಪತ್ರ

ಮಾಡಿಸಿಕೊಂಡಿರುತ್ತೇನೆ. ಖರೀದಿ ಮಾಡಿದ ಮೇಲೆ ಆಸ್ತಿಗೆ ನನ್ನ ಹೆಸರು ದಾಖಲಾಗಿರುತ್ತದೆ.

2. ನಾನು ಸರ್ವೆ ನಂಬರ್ 29/2 3 ಎಕರೆ 13 ಗುಂಟೆ ಆಸ್ತಿಯನ್ನು ನಾನು ದೊಣ್ಣೆ ಮುನಿಯಪ್ಪ, ಎನ್. ಎಲ್ಲಪ್ಪ, ಮುನಿಯಮ್ಮ, ಮತ್ತೊಬ್ಬ ಎಲ್ಲಪ್ಪ, ಸಿ. ಮುನಿಯಪ್ಪ ಮತ್ತು ಸಿ.ಎಮ್. ಗೋಪಾಲ್ ಇವರಿಂದ ಖರೀದಿ ಮಾಡಿರುತ್ತೇನೆ. ಸದರಿ ಆಸ್ತಿಯನ್ನು ಜಿಪಿಎ ಹೋಲ್ಡರ್ ಹಾಗೂ ಮೂಲ ಖಾತೆದಾರರಿಂದ ಪಡೆದಿರುತ್ತೇನೆ. ಮೂಲ ಖಾತೆದಾರರಿಂದ ಒಪ್ಪಿಗೆ ಪತ್ರ ಕೂಡ ಮಾಡಿಸಿಕೊಂಡಿರುತ್ತೇನೆ.

3. ಮೂಲ ಖಾತೆದಾರರು ಸಲ್ಲಿಸಿದ ಅಸಲು ದಾವಾ ನಂಬರ್ 734/2011 ಹಾಗೂ ಅಸಲು ದಾವಾ ನಂಬರ್ 350/2013 ಹಾಗೂ 549/2013 ದಾವೆಗಳನ್ನು ಅವರು ಹಿಂದಕ್ಕೆಪಡೆದುಕೊಂಡಿರುತ್ತಾರೆ (withdraw) ಮಾಡಿಕೊಂಡಿರುತ್ತಾರೆ. ಸದರಿ ದಾವೆಗಳ ಆದೇಶ ಪ್ರತಿಗಳನ್ನು ಹಾಜರುಪಡಿಸುತ್ತೇನೆ.

4. ನಾನು ದಿನಾಂಕ 06.02.2006 ತಹಸೀಲ್ದಾರ್ ಆದೇಶದಂತೆ ವಿಲೇಜ್ ಆಫೀಸರ್ ಅಬಾಲಿಷನ್ ಆಕ್ಟ್ ನಲ್ಲಿ ಮಂಜೂರಾದ ಜಮೀನನ್ನು ಜಂಟಿ ಖಾತೆದಾರರ ಮೂಲಕ ಖರೀದಿ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ಜಂಟಿ ಖಾತೆದಾರರು ವಿಭಾಗ ಮಾಡಿಕೊಂಡಿರುತ್ತಾರೆ ಜಂಟಿ ಖಾತೆದಾರರ ಎಲ್ಲಾ ಆಸ್ತಿಯನ್ನು ನಾನೇ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ವಿಭಾಗಪತ್ರ ವನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮೂಲ ಮಾಲೀಕರ ವಂಶವೃಕ್ಷವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಈ ಕೇಸನ್ನು ಹೊರತುಪಡಿಸಿ ಬೇರೆ ನ್ಯಾಯಾಲಯಗಳಲ್ಲಿ ಈ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾವೆ ಇರುವುದಿಲ್ಲ. ಮಾಲೀಕತ್ವದ ಬಗ್ಗೆ

ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.